ಮನುಷ್ಯನ ಕ್ರೌರ್ಯಗಳನ್ನು ಅಲ್ಲಿ ಕಾಣಬಹುದು. ಬಸಜ್ಜನ ಮಾತುಗಳಲ್ಲಿ ಬರುವ ನಿತ್ಯ ಸತ್ಯಗಳು ಕಥೆಯನ್ನು ಗಟ್ಟಿಗೊಳಿಸಲು ಯತ್ನಿಸಿದರೆ, ಅಲ್ಲಲ್ಲಿ ಬರುವ ಅನಗತ್ಯ ಸಿನಿಮಾ ಮಾತುಗಳು ಕಥೆಯ ಗಾಂಭೀರ್ಯವನ್ನು ಕಸಿದಿವೆ. ಇಷ್ಟಿದ್ದರೂ 'ಎಡೆ' ಕಥೆ ಭಿನ್ನತೆಯನ್ನು ಹೊತ್ತುಕೊಂಡಿದೆ. ಒಂಟಿಕಾಲಿನ ಕಾಗಿ; ಬಸಜ್ಜನ ಬದುಕಿನ ರೀತಿ; ಆಸ್ತಿ ಸಂಬಂಧವಾಗಿ ಹುಡುಗಿಯ ಕೊಲೆ, ಎಲ್ಲಕ್ಕೂ ಸ್ಮಶಾನವು ಸಾಕ್ಷಿಯಾಗಿ ಕೂತಿದೆ. ಮಾತ್ರವಲ್ಲ, ಮನುಷ್ಯನ ಕ್ಷುದ್ರತೆಗಳನ್ನು ಸಹಿಸುತ್ತಿದೆ. ಇಂದಿನ ಸಿನಿಮಾಗಳು ಒಳಗೊಳ್ಳುತ್ತಿರುವ ವಸ್ತು ವೈವಿಧ್ಯ ಕೂಡ ಕಥೆಗಾರನಿಗೆ ಸವಾಲೆನಿಸಿದೆ. ಆ ಲೋಕವನ್ನು ಮೀರಿದ ಜೀವನಕ್ರಮ ಹುಟ್ಟಿದರೆ ಮಾತ್ರ ಕಥೆ ಜೀವಂತವಾಗಬಹುದು.

ವಲಸೆ ಮತ್ತು ಸಂಕರಗಳ ಕುರಿತು ಹಿಂದೆ ಪ್ರಸ್ತಾಪಿಸಿದ್ದೆ. ಪರಂಪರೆಯ ಕಡೆ ನೋಡಿದರೇ 'ಬಂಡಾಯ' ಎಂಬ ಪರಿಕಲ್ಪನೆ ಇವುಗಳನ್ನು ತನ್ನ ಚೌಕಟ್ಟಿನಲ್ಲಿ ಕಂಡಿದ್ದು ಕಡಿಮೆ. ಅಂದಿನ ಸೃಜನಶೀಲ ಬರಹಗಳು ಹಲವು ಬಾರಿ ತಾತ್ವಿಕತೆಗಳ ಭಾರದಿಂದ ಸೊರಗಿದ್ದು ತಿಳಿದ ಸಂಗತಿ. ದಲಿತ ಬರಹಗಳು ದೇಸೀ ಬದುಕಿನ ಶಕ್ತಿ ಮತ್ತು ಅವಮಾನಗಳ ಪೊರೆಗಳನ್ನು ಅನಾವರಣ ಮಾಡಲು ತನ್ನದೇ ನುಡಿಗಟ್ಟುಗಳನ್ನು ಸೃಷ್ಟಿಸಿಕೊಂಡಿದ್ದು ಸತ್ಯವೇ. ತೊಂಬತ್ತರ ದಶಕ ಈ ಎರಡೂ ಮಾರ್ಗಗಳಿಂದ ಮುರಿದಿದ್ದು ಮತ್ತು ಕಟ್ಟಿಕೊಂಡಿದ್ದರ ಕುರಿತು ಚರ್ಚೆ ಬೆಳಸಲು ಅವಕಾಶಗಳಿವೆ. ಜಾತಿ ಬಗೆಗಿನ ಗ್ರಹಿಕೆಗಳು ಬಂಡಾಯದಲ್ಲಿ ಹಲವು ಬಾರಿ ಗೊಂದಲದಂತೆ ಕಂಡಿವೆ. ಹೊಸಬರ ಕಥೆಗಳಲ್ಲಿ 'ವಲಸೆ' ಮತ್ತು 'ಸಂಕರ'ಗಳ ಬೆನ್ನಲ್ಲಿ ಜಾತಿಸಂಘರ್ಷಗಳು, ಪರಿವರ್ತಿತ ಗ್ರಾಮ, ಮನುಷ್ಯರೇ ಕೇಂದ್ರವಾಗುತ್ತಿರುವ ರೀತಿಗಳನ್ನ ಕಾಣಬಹುದು. ಇಂಥ ಕಡೆ ಭಾರವಾದ ತಾತ್ವಿಕತೆಗಳಿಂದ ಕಥೆಗಳು ರೂಪಿತಗೊಂಡಿಲ್ಲ. ಇದನ್ನು ಒಂದು ಲಕ್ಷಣವೆಂದರೂ ಆದೀತು.

ಈಗ ಬರೆಯುತ್ತಿರುವ ಅನೇಕ ಕಥೆಗಾರರು ಗ್ರಾಮ ಮತ್ತು ನಗರಗಳ ನಡುವೆ ಉಸಿರಾಡುತ್ತಿದ್ದಾರೆ. ಬಾಲ್ಯದ ಅನುಭವ, ಕಂಡ ಗ್ರಾಮ ಹಾಗೂ ಬರೆಯುವ ಕಾಲಕ್ಕೆ ಕಾಣುತ್ತಿರುವ ಗ್ರಾಮ ಇವುಗಳ ನಡುವೆ ವಸ್ತುವೈವಿಧ್ಯವಿದೆ. ಇದುವರೆಗೆ ಚರ್ಚೆ ಮಾಡಿದ ಕಥೆಗಳಲ್ಲೂ ಈ ಪ್ರಕ್ರಿಯೆ ಬಂದಿದೆ. ಉತ್ತರ ಕರ್ನಾಟಕ ದಿಕ್ಕಿನಿಂದ ಬರೆಯುತ್ತಿರುವ ಬರಹಗಾರರಲ್ಲೂ ಇದನ್ನು ಗ್ರಹಿಸಬಹುದು. ಇವರ ಬಾಲ್ಯದ ಅನುಭವಗಳು ಪರಂಪರೆಯ ಕಥನದಲ್ಲಿ ಕಂಡಷ್ಟು ಗಟ್ಟಿಯಾಗಿ ಬಂದಿವೆಯೇ? ಎಂಬ ಪ್ರಶ್ನೆಯೂ ಕಾಡುತ್ತದೆ. ಎಲ್ಲೋ ಕೆಲವರು ಅವುಗಳಿಗೆ ತಕ್ಕ ಕಾಣ್ಕೆಯನ್ನು ರೂಪಿಸಿಕೊಳ್ಳಬಲ್ಲರು. ಉತ್ತರ ಕರ್ನಾಟಕ ಭಾಗದಿಂದ ಬರುತ್ತಿರುವ ಕಥೆಗಳಿಗೆ ದೊಡ್ಡ ಸವಾಲು ಈಗಾಗಲೇ ಬಾಲ್ಯದ ಅನುಭವಗಳನ್ನು ದಾಟಿಕೊಂಡು ಬರುವುದು; ಹೊಸ ಲೋಕವನ್ನು ಕಟ್ಟಿಕೊಳ್ಳುವುದರಲ್ಲಿದೆ. ಬೇರೆಯವರಿಗೆ ದಕ್ಕದೇ ಇರುವ ದೊಡ್ಡ ತಾತ್ವಿಕತೆ ಇವರ ಬೆನ್ನಿಗಿದೆ, ಅದೆಂದರೆ ವಚನ ಮತ್ತು ತತ್ವಪರಂಪರೆಗಳು. ಕೆಲವರು ಇವುಗಳನ್ನು ಮುಟ್ಟಿದರೂ ಸದ್ಯದ ಬದುಕಿಗೆ ತಾಕಿಸಿಲ್ಲ. ಇದರಲ್ಲೂ ಸವಾಲೆಂದರೆ ಹಿಂದಿನ ಎರಡೂ ತಲೆಮಾರುಗಳು ರೂಪಿಸಿಕೊಂಡಿಲ್ಲದ ಲೋಕವನ್ನು ಕಲಾತ್ಮಕವಾಗಿ ತರುವಲ್ಲಿ. ಇದರ ನಡುವೆಯೂ ಮುದಿರಾಜ್ ಬಾಣದ್, ನಾಗರಾಜ ಕೋರಿ, ಶರಣಬಸವ ಗುಡದಿನ್ನಿ, ಅಮರೇಶ ಗಿಣಿವಾರ, ಗುನ್ನಾಪೂರ, ಸಿದ್ದು ಸತ್ಯಣ್ಣ , ಕಪಿಲ ಹುಮನಾಬಾದ ಮುಂತಾದವರ ಕೆಲ ಕಥೆಗಳು ಗಮನಕ್ಕೆ ಬಂದಿವೆ. ಹಾಗೆ ನೋಡಿದರೆ ಇವೆರೆಲ್ಲ ಪ್ರತಿಭಾವಂತರು, ಭಾಷೆಯನ್ನು ಬಳಸುವ ವಿಧಾನದಲ್ಲಂತೂ ಸಾಕಷ್ಟು ಮುಂದಿದ್ದಾರೆ. ಇನ್ನೂ ಒಂದು ಲಕ್ಷಣವೆಂದರೆ, 'ರಚನೆ'ಯಲ್ಲಿ ಅಮರೇಶ ನುಗಡೋಣಿಯವರ ಪ್ರಭಾವದಿಂದ ಹೊರಬಂದಿರುವುದು. ಕಥೆಯ ಒಟ್ಟು ರಚನೆಗೆ ನುಗಡೋಣಿ ಆ ಭಾಗಕ್ಕೆ ಒಂದು ಮಾದರಿಯನ್ನು ನಿರ್ಮಿಸಿದ್ದು ಸತ್ಯವೇ. ಹೊಸಬರು ಇದನ್ನು ಗ್ರಹಿಸಿದ ದಾರಿಗಳಲ್ಲಿ ಲೋಪಗಳಿವೆ. ನುಗಡೋಣಿ ನಂತರ ಬಂದ ಅದೇ ಭಾಗದ ಕೆಲ ಕಥೆಗಾರರು ಈ ಕ್ರಮವನ್ನು ಸರಿಯಾಗಿ ಅರಿಯದೇ ಹೋದರು. ಆದರೆ, ಮೇಲೆ ಹೆಸರಿಸಿದ ಕಥೆಗಾರರು ಕಂಡ ಅನುಭವ ಜಗತ್ತನ್ನು, ತಮಗೆ ದಕ್ಕಿದ ನಿರೂಪಣೆಯಲ್ಲಿ ಕಥೆ ಕಟ್ಟುತ್ತಿರುವುದನ್ನು ಕಾಣಬಹುದು. ಇವರ ಕಥೆಗಳಲ್ಲಿ ಚದುರಿದ ಬಾಲ್ಯದ ಅನುಭಗಳಿವೆ; ಇದಕ್ಕೊಂದು ದರ್ಶನದ ಸ್ಪರ್ಶಕೊಡುವಲ್ಲಿ ಮಾಗಬೇಕಷ್ಟೇ. ಈ ನೆಲದ 'ಕೂಡುಬದುಕಿಗೆ' ಅಂಟಿಕೊಂಡಿರುವ ಅನುಮಾನದ ಪಿಶಾಚಿಗಳನ್ನು ಇವರು ಸರಿಯಾಗಿ ಗ್ರಹಿಸಬಲ್ಲರು.

ಅಮರೇಶ ಗಿಣಿವಾರ ಹೆಣ್ಣುಜಗತ್ತನ್ನು ಕಂಡಿರುವ ಕ್ರಮ ಮತ್ತು ಗಂಡಿನ ಒರಟುತನದ ಕ್ರೂರತೆಯನ್ನು ಕಥನಲೋಕಕ್ಕೆ ತರುತ್ತಾರೆ. 'ಸಣ್ಣ ಸಂಗತಿ'ಗಳನ್ನು ಕಥೆಗಳ ವಸ್ತುವನ್ನಾಗಿ ಮಾಡಿಕೊಂಡರೂ ಕಾಡುವ ಸಾಂದ್ರತೆಯನ್ನು ತರಲಾರರು. ತಮಗೆ ದಕ್ಕಿರುವ ಹೊಸ ಬಗೆಯ ಬದುಕಿನ ನೋಟಗಳನ್ನು ತಾವಾಗಿಯೇ ಅಂತ್ಯಗೊಳಿಸುತ್ತಾರೆ. ವೈಚಾರಿಕತೆ ಮತ್ತು